(45) 2

Regd No B G 155 Sri 7-3-1965

# ಸತ್ಯವಾದಿ

48th Year
Satyavadi
DAILY-
MYSORE 4

ಸಂಸ್ಥಾಪಕರು — ಅಂಮಸೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರವಿಶಾರದ ಎಂ ಎಸ್ ಕೃಷ್ಣರಾವ್ 2 ಪೈ

## ಹಕ್ಕುಗಳಿಗಾಗಿ ಹೋರಾಟ

ಎಸ್ ಜೆ ಓ ಗಳ ವಿಚಾರದಲ್ಲಿ ಸರ್ಕಾರ ಮಾತಿನಲ್ಲಿ ಸಹಾನುಭೂತಿ ತೋರಿಸುತ್ತಿರುವುದರಲ್ಲಿ ಯಾವ ಪ್ರಯೋಜನವೂ ಇಲ್ಲವೆಂದು ರಾಜ್ಯದ ಎಸ್ ಜೆ ಓ ಸಂಘದ ಅಧ್ಯಕ್ಷರಾದ ಶ್ರೀಮತಿ ವೇರಿ ದೇವಾಸಿಯಾ ಹೊನ್ನಾಳಿಯಲ್ಲಿ ತಿಳಿಸಿದರು

೦ ೦

ಸರ್ಕಾರದ ನಿಬಂಧನೆಗಳ ವ್ಯಾಪ್ತಿಯಲ್ಲಿ ನಮ್ಮ ಹಕ್ಕುಗಳಿಗಾಗಿ ಹೋರಾಡುವುದಾಗಿ ಶ್ರೀಮತಿ ವೇರಿ ದೇವಾಸಿಯಾರವರು ಚನ್ನಗಿರಿ ಎಸ್ ಜೆ ಓ ಗಳನ್ನು ಉದ್ದೇಶಿಸಿ ತಿಳಿಸಿದರು.

## ಮೋಸದ ಆಪಾದನೆಗೆ ಬಂಧನ

ಲಾಂಛನ ತೊಡಿಸುವುದಾಗಿ ಹೇಳಿ ಹುಮಳಾಂಜನ ವರ್ತಕರೊಬ್ಬರಿಗೆ ಇಪ್ಪತ್ತು ಸಾವಿರ ರೂಪಾಯಿ ಗಳಿಗೆ ಮೋಸಮಾಡಿದ ಆಪಾದನೆಗೊಳಗಾದ ಪೋಲೀಸ್ ಇಲಾಖೆಗೆ ಬೇಕಾಗಿದ್ದ ಕಾದಸ್ವಾಮಿ ಗೌಂಡರ್ ಎಂಬವನನ್ನು ಸೇಲಂನಲ್ಲಿ ದಸ್ತಗಿರಿ ಮಾಡಿ ಹೆಂಗಳೂರಿಗೆ ಕರೆತಂದಿರಲಾಗಿದೆ.

## ಅಧಿಕ ಉತ್ಪಾದನೆ

ವಿಶೇಷ ಉದ್ಯಮಿನ ಕಾರ್ಖಾನೆಯಾಗಿ ಪದ್ಮಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಪರಿವರ್ತಿತವಾದಾಗ ೧೨ ಪಟ್ಟು ಕೊಟ್ಟಿ ಪೊತ್ತದ ಉತ್ಪಾದನೆ ಆಗುವ ನಿರೀಕ್ಷೆ ಇದೆ.

## ಆಹ್ವಾನಕ್ಕೆ ಅಂಗೀಕಾರ

ಪ್ರಧಾನಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರಿಗೆ ಮತ್ತು ಕಳ್ಳಾಪಾಂತ್ರಿ ಶ್ರೀ ಸ್ವರ್ಣಸಿಂಗರಿಗೆ ತಮ್ಮ ದೇಶಕ್ಕೆ ಭೇಟಿಕೊಡುವಂತೆ ಜಕೋಸ್ಲೋವೇಕಿಯಾ ಪ್ರಧಾನಿ ಲಿಪಾರ್ಟರು ಇತ್ತೀಚಿನ ಆಹ್ವಾನವನ್ನು ಅಂಗೀಕರಿಸಿದ್ದಾರೆ

## ಆತ್ಮರಕ್ಷಣೆಗಾಗಿ ಗುಂಡು

ಕರ್ನೂಲಿಗೆ ಬಂದಿರುವ ವಾರ್ತೆಯ ಪ್ರಕಾರ, ದೇವಬಾಂಡ ಗ್ರಾಮದಲ್ಲಿ ಪಂಚಾಯತಿ ಸಮಿತಿಯೊಂದರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಒರ್ವರ ವೇಲೆ ಬ್ಲೌಡ್ಯ ನಡೆಸಿದಾಗ ಆತ್ಮರಕ್ಷಣೆಗಾಗಿ ಪೋಲೀಸು ಕಾನ್‌ಸ್ಟೇಬಲು ಫಿರ್ಯಾದು ಗುಂಡುಹಾರಿಸಿದನು. ಗುಂಡಿನೇಟಿನಿಂದ ಗಾಯಗೊಂಡವನೊ ರ್ವನು ಆಸ್ಪತ್ರೆಯಲ್ಲಿ ಮರಣಹೊಂದಿದನು

## ಕೊಲಂಬೊ ಸೂತ್ರ

ಚೀನಾ—ಭಾರತ ಗಡಿ ಸಮಸ್ಯೆ ಪರಿಹಾರಕ್ಕೆ ಕೊಲಂಬೊ ಸೂತ್ರ ಸರಿ ಆದುದೆಂದು ಜೆಕೊಸ್ಲಾವಿಯ ಪ್ರಧಾನಿ ಲಿಪಾರ್ಟರು ಬೊಂಬಾಯಿನಲ್ಲಿ ತಿಳಿಸಿದರು.

.....

ಅನ್ಯೋನ್ಯ ವಿಷಯದಲ್ಲಿ ಚೀನಾದ ಆಕ್ರಮಣ ಉದ್ದೇಶಗಳ ವಿಚಾರದಲ್ಲಿ ಅನೇಕರಿಗಾ ಹಾಗೂ ಭಾರತ ನಾಯಕರಲ್ಲಿ ಸಾಮಾನ್ಯ ಒಪ್ಪಂದವಿದೆಯೆಂದು ಜೆಕೊಸ್ಲಾವಿಯ ಪ್ರಧಾನಿ ಲಿಪಾರ್ಟರ್ ತಿಳಿಸಿದರು.

## ವಾರ್ತಾ ವಿಶೇಷಗಳು

ಭಾಷಾ ಪ್ರಶ್ನೆಯ ಮೇಲೆ ದ್ವೇಷ ಮತ್ತು ತಾಳ್ಮೆ ಕಳೆದುಕೊಳ್ಳ ದಿರಲು ರಾಷ್ಟ್ರಪತಿಗಳು ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರು ಬರೋಡಾದಲ್ಲಿ ಮನವಿ ಮಾಡಿಕೊಂಡರು.

★

ರಾಷ್ಟ್ರ ಭಾಷೆ ಅಭಿವೃದ್ಧಿಗಾಗಿ ಹಿಂದಿ ಮಂತ್ರಿ ಶಾಖೆ ಸ್ಥಾಪಿಸಬೇಕೆಂದು ಹಿಂದಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸೇಟ್ ಗೋವಿಂದ ದಾಸರು ಮೊದಲನೆ ಗವರ್ನಿಂಗು ಬಾಡಿ ಸಭೆಯಲ್ಲಿ ತಿಳಿಸಿದರು ಎಂದು ಅಲಹಾಬಾದು ವಾರ್ತೆ.

★

ಪ್ರತಿ ವರ್ಷ ಕಡಿಮೆ ಪಕ್ಷ ಒಂದು ಜಾರಿಯಾದರು ಪಾರ್ಲಿಮೆಂಟಿನ ಅಧಿವೇಶನ ನಡೆಯುವುದೇಕೆಂದು ದಾವಣಗೆರೆಯ ಸ್ವೀಕೃತ ಕಳಗಂ ನಾಯಕರಾದ ಶ್ರೀ ಸಿ ಎಸ್ ಅಣ್ಣಾದೊರೆಯವರು ನವ ದೆಹಲಿಯಲ್ಲಿ ತಿಳಿಸಿದರು. ಪತ್ರಿಕೆಯವರೊಡನೆ ಮಾತನಾಡುತ್ತಿದ್ದ ಅವರು ಪ್ರಸ್ತುತದಲ್ಲಿ ಎದ್ದಿರುವಾದರೂ ಹೈದರಾಬಾದಿನಂತೆ ಭಾರತದ ಅಭ್ಯರ್ಥಿ ಭವನ ಇಂದೇಕೆಂದು ಅವರು ತಿಳಿಸಿದರು.

★

ಹಿಂದಿ ಹೇರುವುದರಲ್ಲಿ ಅಧಿಕೃತ ಪ್ರಯತ್ನಗಳನ್ನು ತ್ಯಜಿಸುವುದಾಗಿ ದಕ್ಷಿಣದಲ್ಲಿ ಹಿಂದಿ ಪ್ರಚಾರಕ್ಕೆ ತಮ್ಮ ಪಕ್ಷ ಬೆಂಬಲಕೊಡುವುದಾಗಿ ದ್ರಾವಿಡ ಮುನ್ನೇತ್ರ ಕಳಗಂ ನಾಯಕರಾದ ಶ್ರೀ ಸಿ. ಎನ್. ಅಣ್ಣಾದೊರೆಯವರು ನಿನ್ನೆ ನವ ದೆಹಲಿಯಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

❀

ಕಾಶ್ಮೀರವಿಚಾರದಲ್ಲಿ ತಮ್ಮ ದೇಶದ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲವೆಂದೂ ಮುಂಚಿನಂತೆಯೇ ಇದೆ ಮುಂದೂ ಜಕೋಸ್ಲಾವೇಕಿಯಾ ಪ್ರಧಾನಿ ತಹರ್ಟರು ನವ ದೆಹಲಿಯಲ್ಲಿ ತಿಳಿಸಿದರು.

## ಕಾಂಗ್ರೆಸ್ ಮಂತ್ರಿಮಂಡಲವಿಲ್ಲ

ನವ ದೆಹಲಿಯಿಂದ ಬಂದಿರುವ ವಾರ್ತೆಯ ಪ್ರಕಾರ ಇತ್ತೀಚೆಗೆ ಹಂಪಾಸ ತೆರಿಗೆ ಅಧಿಕಾರಿಗಳು ಓರ್ವರ ಮನೆಯನ್ನು ಕೇಂದ್ರ ರಹಸ್ಯ ಸಂಸ್ಥೆಯವರು ಶೋಧಿಸಿ ರೂ 2 ಲಕ್ಷಕ್ಕೆ ಪೂರೈದ ಬಾಂಡುಗಳನ್ನು ಒಂದು ಲಕ್ಷ ರೂ ಬಾಳುವ ಅಭರಣಗಳನ್ನು ಪತ್ತೆಹಚ್ಚಿದ ಅಧಿಕಾರಿಗಳನ್ನು ವಶಪಡಿಸಿಕೊಂಡರು.

—

ಕೇರಳದಲ್ಲಿ ಸರ್ಕಾರ ರಚನೆ ಮಾಡುವದಕ್ಕೆ ಕಾಂಗ್ರೆಸ್ಸು ಪ್ರಯತ್ನ ಮಾಡುವದಿಲ್ಲವೆಂದು ಪ್ರಧಾನಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರು ನಿನ್ನೆ ಅವರ ಬಾಬಾದಿನಲ್ಲಿ ತಿಳಿಸಿದರು.

ಜನತಾಯಿಕರಾಗಿರುವ ಸ್ಥಾನಿಬದ್ಧ ಪಡಿಗಡೆ ಮಾಡುವದಾದರೆ ತಾವು ಪಂಚಾಯಿತಿಯಂಡಲ ರಚಿಸುವದು ಸಾಧ್ಯವೆಂದು ಕಮ್ಯೂನಿಸ್ಟು ಎಡಪಕ್ಷದ ನಾಯಕ ಶ್ರೀ ಇ.ಎಂ ಎಸ್ ನಂಬೂದಿರಿಪಾದರು ತಿರುವನಂತಪುರದಲ್ಲಿ ತಿಳಿಸಿದರು

ತಮ್ಮ ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದರೆ ಈ ತಿಂಗಳು 13 ನೇ ತಾರೀಖಿನಿಂದ ಸಾಮೂಹಿಕ ಉಪವಾಸ ಮಾಡುವುದಾಗಿ ಎಸ್ ಜೆ ಓ ಜಂಟಿ ಸಮಿತಿ ಸೂಚಿಸಿದೆ.

ಕರ್ನೂಲಿಗೆ ಹದಿನೆಂಟು ಮೈಲುಗಳ ದೂರದ ನುಂಚೆಪಲಾ ಗ್ರಾಮದ ಬಳಿ ಮೊನ್ನೆ ರಾತ್ರಿ ಮಿತಿಮೀರಿ ಜನರಿದ್ದ ನಾಡ ದೋಣಿಯೊಂದು ಮುಳುಗಿ 30 ಪ್ರಯಾಣೀಕರು ಮುಳುಗಿಹರೆಂದು ಹೈದರಾಬಾದು ವಾರ್ತೆ.

### ನಾಳೆಯ ಸಂಭಾಂಗ

ಅಸ್ಥಾನವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿರೋಮಣಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ಯಾನಿಧಿ
ಸಂದ್ಯಾ ಕೃಷ್ಣಜೋಯಿಸರಿಂದ
೫ ಸ್ತೋತ್ರವಾರ ಪಂಚಮಿ ಧನಿಷ್ಠೆ

—

ಇಂದು ಪತ್ರಿಕೆಯ ಪ್ರಕಟವಾಗಿದ್ದ ನಾಳೆ ಪತ್ರಿಕೆಗೆ ರಜವಿಡಿ.

## ಸಮಾಚಾರ ಸಂಗ್ರಹ

❀

ಬೆಂಗಳೂರು— ವಿಧಾನಸಭೆಯಲ್ಲಿ ಎಸ್ಸೆಸ್ಪಿಯ ಗೋವಾಲಗೌಡರು ಸಂಕಾತಂ ವಂದಿಗಾರಂನ್ನು ಎಳೆದುಕೊಂಡು ಹೋಗಿ ಸ್ವೀಕಂ ಮಾಡಿದೆ ನಿಲ್ಲಿಸಿ ಡೂರಿಕ್ಕಂ ; ಸಭೆಯಲ್ಲಿ ಇದರಿಂದ ಸ್ವಲ್ಪ ಗಡಬಿಡಿ ಆಯಿತು

❀

ನವದೆಹಲಿ—ಹೈಕೋರ್ಟಿನಲ್ಲಿ 7000 ಕ್ಕೂ ಹೆಚ್ಚು ಹೊಸದ್ದ ಮೆ.ಗಳು ತೀರ್ಮಾನವಾಗದೇ ಕೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

❀

ವಿಶ್ವಸಂಸ್ಥೆ— ಪಾಕಿಸ್ತಾನವು ತನ್ನ ಅಧೀನದಲ್ಲಿರುವ ಕಾಶ್ಮೀರ ಭಾಗವನ್ನು ಸೇರ್ಪಡೆ ಮಾಡಿಕೊಳ್ಳುವ ನ್ಯಾಯಬಾಹಿರ ಕಾರ್ಯಕ್ಕೆ ಕೈಯಿಕ್ಕಿರುವುದೆಂದು ಭಾರತವು ವಿಶ್ವಸಂಸ್ಥೆಗೆ ಪ್ರತಿಭಟನೆ ಸಲ್ಲಿಸಿದೆ.

❀

## ಮಾನಿನಹಣ್ಣಿನ ರಫ್ತು

ಮಾನಿನಹಣ್ಣಿನ ರಫ್ತಿನಲ್ಲಿ ಸಂಯುಕ್ತ ಅಮೇರಿಕಾ ಗಣರಾಜ್ಯವು ಭಾರತಕ್ಕಿಂತ ಒಂದು ಶ್ರೇಷ್ಠ ಮುಂದಾಗಿದೆ : ಲಬೆರಾಸ್ಸು, ಇಟಲಿ, ಸ್ವಿಡ್ಜರ್ಲೆಂಡು, ಸ್ಪಾನಿ ಅರೇಬಿಯಾ, ಕುವೈಟ್ ಮತ್ತು ಲಿಬಿಯಾಕ್ಕೆ ರಫ್ತು ಮಾಡುವುದಲ್ಲದೆ, ದೇಶಕ್ಕೆ ಬರುವ ಪ್ರವಾಸಿಗಳಿಗೂ ಹೆಚ್ಚು ಮಾರಾಟವಾಗಿದೆ : ಇದರಿಂದ ವರ್ಷಕ್ಕೆ ೫೦ ದು ಮಿಲಿಯ ಡಾಲರುಗಳನ್ನು ಸಂಯುಕ್ತ ಅಂಬಾ ಗಣರಾಜ್ಯ ಸಂಪಾದಿಸುತ್ತಿದೆ ; ಈಚೆಗಿನ 10 ವರ್ಷಗಳಲ್ಲಿ ಮಾನಿನಹಣ್ಣು ಬೆಳೆಯಾಗುವ ಭೂವಿಸ್ತಾರವು ಎಂಟರಷ್ಟು ಹೆಚ್ಚಿಸಲಾಗಿದೆ.

ಭಾರತದ ಸ್ವಲ್ಪ ರಫ್ತು ಮಾಡುತ್ತಿದ್ದರೂ ಈ ಬಗ್ಗೆ ಹೆಚ್ಚು ಲಕ್ಷ್ಯ ಕೊಡಲಿಲ್ಲ

ಅಮೇರಿಕದ ಮೆಕ್ಸಿಕೋದಿಂದ ಕಳೆದ ವರ್ಷ 434000 ಡಾಲರುಗಳ ಮಾನಿನ ಹಣ್ಣನ್ನು ಕೊಂಡಿತು.

ಪೂರ್ವ ಏಷ್ಯಾ ದೇಶಗಳಲ್ಲಿ ಮಾನಿನ ಕಾಯಿನ ಕಾಂದ ಮತ್ತು ಸಿಹಿ ಉಪ್ಪಿನ ಕಾಯಿಗೆ ಹೆಚ್ಚು ಕೀರ್ತಿಯಿದೆ : ಮಾನಿನ ಹಣ್ಣಿನ ಕಾಲದಲ್ಲಿ ಪ್ರತಿ ಭಾರತ ರೇನು ಪಟ್ಟಣಗಳಲ್ಲಿ ಪ್ರಯಾಣೀಕರು ಅವಶ್ಯಕ ಅಲ್ಫಾನ್ಸೊ ಮಾವಿನಹಣ್ಣಿಗೆ ಆದ್ಯತೆ ಕೊಳ್ಳಬಹುದು.


# ನಿಮ್ಮ ಅವಶ್ಯವಿರುವ ವಯಸ್ಸಿನ ದಾಖಲೆಯನ್ನು ಒದಗಿಸಿಯೆವಿರಾ?

ಜೀವ ವಿಮಾ ಪಾಲಿಸಿದಾರರಿಗೆ

ನಿಮ್ಮ ಪಾಲಿಸಿಯಲ್ಲಿ ಸೂಚಿಸಿರುವ ವಯಸ್ಸಿನ ಬಗ್ಗೆ ದಾಖಲೆಯೆನ್ನು ಒದಗಿಸುವ ವರೆಗೆ ನಿಮ್ಮ ಪಾಲಿಸಿಯ ಮೇಲಿನ ಕ್ಲೈಮ್‌ಗಳನ್ನು ಪರಿಶೀಲಿಸಲಾಗುವುದಿಲ್ಲ.

ಎಲ್.ಐ.ಸಿ.ಯು ಈ ಕೆಳಗಿನವುಗಳನ್ನು ದಾಖಲೆಯಾಗಿ ಸ್ವೀಕರಿಸುತ್ತದೆ :

- ಮೂಲ ಜಾತಕಗಳನ್ನು ಅಥವಾ
- ಜನನ ಅಥವಾ ಬಾಪ್ಟಿಸಮ್ ಸರ್ಟಿಫಿಕೇಟುಗಳನ್ನು.
- ಶಾಲೆ, ಕಾಲೇಜು ಅಥವಾ ಸರ್ವೀಸ್ ರೆಕಾರ್ಡುಗಳಿಂದ ಉದ್ಧೃತಿಗಳನ್ನು.

ಇಂದೇ ನಿಮ್ಮ ಪಾಲಿಸಿಯ ತಪಾಸಣೆಮಾಡಿರಿ. ನಿಮ್ಮ ವಯಸ್ಸಿನ ಬಗ್ಗೆ ದಾಖಲೆಯನ್ನು ಒಪ್ಪಿಸದಿದ್ದಲ್ಲಿ ಅದನ್ನು ಕೂಡಲೆ ಮಾಡಿರಿ. ಮತ್ತು ಯಾವಾಗಲೂ ನಿಯಮಿತ ಸಮಯದಲ್ಲಿ ನಿಮ್ಮ ಪ್ರೀಮಿಯಮ್‌ಗಳನ್ನು ಪಾವತಿ ಮಾಡಲು ಮರೆಯಬೇಡಿ.

ವಯಸ್ಸಿನ ದಾಖಲೆಯ ಅಭಾವದಿಂದಾಗಿ 31 ಮಾರ್ಚ್ 1964ರಂದು ಕೊನೆಗೊಂಡ ವರ್ಷದಲ್ಲಿ 3,166 ಕ್ಲೈಮ್‌ಗಳನ್ನು ಸಲ್ಲಿಸಲಾಗಲಿಲ್ಲ.

ಲೈಫ್ ಇನ್ಷೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ASP-LIC-AS 20

# ವುಡ್‌ಲಾಂಡ್ ಜನಭರಿತ 2 ನೇ ವಾರ

— ಅತ್ಯದ್ಭುತ ಹಿಂತ ಚಿತ್ರ —

## ಘೂಲೋಂ ಕೆ ಸೇಜ್

ನಟವರ್ಗ— ವೈಜಯಂತಿಮಾಲಾ, ಅಶೋಕ್‌ಕುಮಾರ್, ನಂಪಲ್ಲಿ, ಮನೋಜ್‌ಕುಮಾರ್, ಮಹಮೂದ್

[ ದಿನವಹಿ 3 ಪ್ರದರ್ಶನಗಳು ]

# ಅಪೆರಾ— 5-3-65 ರಂದ

## ನಾಗ ಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ, ರಾಜಶ್ರೀ, ರಾಘವೇಂದ್ರರಾವ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

# ಚಿತ್ರೋದಯ ಟಾಕೀಸ್?

ಕಿಂಗ್ಸ್‌ಕೋರ್ಟ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಅಭಿರುಚಿಯ ಚಿತ್ರಗಳನ್ನೂ ತೋರಿಸುವುದಕ್ಕೆ

ಎಲ್ಲ ಪಟ್ಟಿಗಳಿಗೂ ಚಿತ್ರಕ್ಕೆ ನಾಡಿದ್ದಾಗುವುದಕ್ಕೆ

# SHAKTI SUDHA

Superb Tonic

# Help The 'Gorakshana'

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4